# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/03/2020-21

ಸಹಾಯಕ ಅಭಿಯಂತರರ ಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 22.06.2021

**ದಿನಾಂಕ: 22.06.2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದವರು:**

- ಶ್ರೀ ಜಿ ಶ್ರೀನಿವಾಸಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ಡಾ॥ ದಯಾಕರ್ , ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀಮತಿ. ಕವಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ
- ಶ್ರೀ. ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು, ಅರೋಗ್ಯ
- ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) (**BWSSB**).

<u>ವಾರ್ಡ್ ಸಮಿತಿ ಸದಸ್ಯರು</u>

- ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ, ಸದಸ್ಯರು
- ಶ್ರೀ. ಅಂತೋನಿ ದಾಸ್, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ ಗಿರೀಶ್ ಎ, ಮಾರುತಿನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ ಗೋಪಿ ಕೆ, ಮಾರುತಿನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ನೋಡಲ್ ಅಧಿಕಾರಿ ರವರು ಮಾತನಾಡುತ್ತ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಓದಿ ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಿರುವ ಕುರಿತು ಹಾಜರಿದ್ದ ಅಧಿಕಾರಿಗಳಿಗೆ ಮತ್ತು ವಸತಿ ಕ್ಷೇಮಾಭಿವೃದಿ ಸಂಘದ ಸದಸ್ಯರುಗಳ ಜೊತೆಗೆ ಚರ್ಚಿಸಿದರು. ನಂತರ ಹಾಜರಿದ್ದ ಅಧಿಕಾರಿಗಳು ಸಮಸ್ಯೆಗಳನ್ನು ಬಗೆಹರಿಸಿರುವುದಾಗಿ ಸಭೆಗೆ ತಿಳಿಸಿದರು.

ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ, ಸದಸ್ಯರು ಮಾತನಾಡಿ, ಚರಂಡಿಯಲ್ಲಿ ಸಿಲ್ಟ್ ತುಂಬಿರುವುದರಿಂದ ನೀರಿನ ಹರಿವು ಸಾರಾಗವಾಗಿ ಹರಿಯದೆ ಸ್ಥಗಿತವಾಗಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯನ್ನುಂಟು ಮಾಡುತ್ತಿದೆ ಹಾಗೂ ಬೋರ್‌ವೆಲ್ ಇದ್ದು, ಈಗಾಗಲೇ ಸದರಿ ಬೋರ್‌ವೆಲ್‌ನಲ್ಲಿ ನೀರು ನಿಂತು ಹೋಗಿರುವುದರಿಂದ ಪರ್ಯಾಯ ಬೋರ್‌ವೆಲ್ ಕೊಳವೆಬಾವಿಯನ್ನು ಕೊರೆಯಿಸುವಂತೆ ಸಭೆಯಲ್ಲಿ ಮನವಿ ಮಾಡಿದರು.

ಈ ಕುರಿತು ನೋಡಲ್ ಅಧಿಕಾರಿಗಳು ಮಾತನಾಡಿ ಸಿಲ್ಟ್ ಮತ್ತು ಟ್ರಾಕ್ಟರ್ ಬಿಟ್ಟು ಸಮಸ್ಯೆಯನ್ನು ಬಗೆಹರಿಸಲು ಶ್ರೀ ಪ್ರವೀಣ್ ರವರಿಗೆ ಸೂಚಿಸಿದರು. ನಂತರ ಶ್ರೀ ಪ್ರವೀಣ್, ಕಿರಿಯ ಅಭಿಯಂತರರು ಮಾತನಾಡಿ ಸದರಿ ಸಿಲ್ಟ್ ಮಣ್ಣನ್ನು ತೆಗೆದು ಡಂಪಿಂಗ್ ಯಾರ್ಡ್‌ಗೆ ಸ್ಥಳಾಂತರಿಸಲಾಗುವುದು ಹಾಗೂ ಸದರಿ ಬೋರ್‌ವೆಲ್ ನಿರ್ವಹಣ ಅವಧಿ ಕಾಮಗಾರಿ ಮುಕ್ತಾಯವಾದ ಒಂದು ವರ್ಷವಾಗಿದ್ದು ನಂತರ ಬೋರ್‌ವೆಲ್ ಅನ್ನು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರಿಗೆ ಹಸ್ತಾಂತರಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಶ್ರೀ. ಅಂತೋನಿ ದಾಸ್, ಸಹಕಾರನಗರ ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಮಾತನಾಡಿ ಸಹಕಾರನಗರದಲ್ಲಿ ಸರ್ಕಾರಿ ಜಾಗವು ಒತ್ತುವರಿಯಾಗಿರುವುದು ಕಂಡುಬಂದಿರುತ್ತದೆ. ಐದು ಉದ್ಯಾನವನಗಳ ಜಾಗಗಳಿಗೆ ಖಾತಾ ಪ್ರಮಾಣ ಪತ್ರ ಮಾಡಿಸಿಕೊಡಿರುತ್ತಾರೆ ಎಂದು ಸಭೆಗೆ ತಿಳಿಸುತ್ತ, ಸಮಸ್ಯೆಯನ್ನು ಬಗ್ಗೆಹರಿಸಲು ಸಭೆಗೆ ಕೋರಿದರು.

ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಮಾತನಾಡಿ ಜಂಟಿ ಆಯುಕ್ತರು (ಯಲಹಂಕ ವಲಯ) ರವರಿಂದ ಬಿಡಿಎ ರವರಿಗೆ ಪಾರ್ಕ್‌ಗಳನ್ನು ಗುರುತಿಸಿ ಕೊಡಬೇಕೆಂದು ಪತ್ರ ಬರೆಯಲಾಗಿದ್ದು ಹಾಗೂ ಸದರಿ ಪ್ರಕರಣವು ಉಚ್ಛ ನ್ಯಾಯಲಯದಲ್ಲೆ ದಾವೆ ಇರುವುದಾಗೆ ತಿಳಿಸುತ್ತಾ, ನ್ಯಾಯಾಲಯದ ತಿರ್ಪಿನ ನಂತರ ಸಮಸ್ಯೆ ಬಗೆಹರಿಸಲಾಗುವುದೆಂದು ಸಭೆಗೆ ತಿಳಿಸಿದರು.

ಈ ಕುರಿತು ನೋಡೆಲ್ ಅಧಿಕಾರಿಗಳು ಮಾತನಾಡಿ ಸದರಿ ಬಡಾವಣೆಯ ಸಮಸ್ಯೆಯನ್ನು ಕಂದಾಯ ಪರಿವಿಕ್ಷಕರು ಹಾಗೂ ಶ್ರೀ ಪ್ರವೀಣ್ ಎ.ಆರ್, ಕಿರಿಯ ಅಭಿಯಂತರರವರಿಗೆ ಒತ್ತುವರಿದಾರರಿಗೆ ಅವಕಾಶ ನೀಡದಂತೆ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ರಕ್ಷಿಸಲು ಫೆನ್ಸಿಂಗ್, ಕಾಂಪೌಡ್ ಹಾಗೂ ಸೂಕ್ತ ಕ್ರಮಗಳನ್ನು ಕೈಗೊಳ್ಳಲ ಸೂಚಿಸಿದರು.

ಶ್ರೀ ಗಿರೀಶ್ ಎ, ಮಾರುತಿನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ರವರು ಮಾತನಾಡಿ ಸದರಿ ಬಡಾವಣೆಗೆ ಬೋರ್‌ವೆಲ್ ಕೊಳವೆಬಾವಿಯನ್ನು ಕೊರೆಯಿಸುವಂತೆ ಸಭೆಯಲ್ಲಿ ಮನವಿ ಮಾಡಿದರು ನಮ್ಮ ಬಡಾವಣೆಯಲ್ಲಿ ಈಗಾಗಲೇ ನೀರಿನ ಸಮಸ್ಯೆ ಇರುವುದರಿಂದ ಬಡಾವಣೆಗಳಲ್ಲಿ ನೀರಿನ ಅಭಾವ ಹೆಚ್ಚಾಗಿರುತ್ತದೆ ಹಾಗೂ ಬ್ಲಾಕ್ ಸ್ಪಾಟ್‌ಗಳನ್ನು ಸರಿಪಡಿಸಿ ಕೊಡುವುದಾಗಿ ಹಾಗೂ ಮೋರಿ ಸ್ಲಾಬ್‌ಗಳನ್ನು ಹಾಕಿಸಿ ಕೊಡುವಂತೆ ಸಭೆಗೆ ತಿಳಿಸಿದರು.

ಶ್ರೀ ಪ್ರವೀಣ್ ಎ.ಆರ್, ಕಿರಿಯ ಅಭಿಯಂತರರು ರವರು ಮಾತನಾಡಿ ಸಮಸ್ಯೆಯನ್ನು ಬಗೆಹರಿಸಿ ಕೊಡುವುದಾಗಿ ಸಭೆಗೆ ತಿಳಿಸಿದರು

ಅಂತಿಮವಾಗಿ ನೋಡಲ್ ಅಧಿಕಾರಿಯವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದರು ನಂತರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ಪ್ರವೀಣ್ ಎ.ಆರ್.)
ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ ವಿಭಾಗ

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08

<u>ಪ್ರತಿಯನ್ನು:-</u>

1. ಮಾನ್ಯ ಆಡಳಿತ ಅಧಿಕಾರಿಗಳು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹ `ತ್ ನೀರುಗಾಲುವೆ ರವರ ಮಾಹಿತಿಗಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಡಿಗೇಹಳ್ಳಿ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
9. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.